ಅವರಿಗೆ ತಿಳಿದಿಲ್ಲ. ಇಂಥವೇ ಸಂಕೋಲೆಗಳು ಹೆಣ್ಣನ್ನು ಸುತ್ತುವರಿದಿವೆ ಎಂದು ಆಕೆಗೆ ತಿಳಿದಾಗ ಆಕೆ ಅವುಗಳ ವಿರುದ್ಧ ಹೋರಾಡುತ್ತಾಳೆ. ಆದರೆ ಮಾನಸಿಕವಾಗಿ ಅನೇಕ ಸಂಕೋಲೆಗಳಿಂದ ಬಂಧಿತನಾದ ಪುರುಷನಿಗೆ ಅದಾವುದರ ಅರಿವೂ ಆಗುವುದೇ ಇಲ್ಲ. ಆದರೆ ತಾನಂದುಕೊಂಡಂತೆ ಪುರುಷನು ಅಷ್ಟು ಸ್ವೇಚ್ಛಾಜೀವಿಯೂ ಮಾನವೀಯತೆ ಉಳ್ಳವನೂ ಅಲ್ಲ. ಅವನನ್ನು ಮುತ್ತಿಕೊಂಡ ಸಂಕೋಲೆಗಳನ್ನು ಪತ್ತೆಮಾಡಿ ಅವುಗಳ ವಿರುದ್ಧ ಹೋರಾಡಿ ತಾನು ಮುಕ್ತನಾದಾಗ ಮಾತ್ರ ಅವನು ಮಾನವೀಯನಾಗಲು ಸಾಧ್ಯ. ಆ ಉದ್ದೇಶದಿಂದಲೇ ನಾನು 'ಬಂಧಿತ' ಕತೆ ಬರೆದೆ.

- **ನಿಮ್ಮ ತಂದೆ ಪೋಪೂರಿ ವೆಂಕಟಸುಬ್ಬಾರಾವು ಕೃಷಿಕರಾಗಿದ್ದರಲ್ಲದೇ ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಆಗಿದ್ದರು. ನಿಮ್ಮ ವೈಚಾರಿಕ ಚಿಂತನೆಗಳ ಮೇಲೆ ತಂದೆಯವರ ಪ್ರಭಾವ ಎಷ್ಟರಮಟ್ಟಿಗೆ ಇದೆ?**

ನನ್ನ ಹೆಸರಿನಿಂದ ಮೊದಲುಗೊಂಡು ನನ್ನ ಇಲ್ಲಿಯವರೆಗಿನ ಬೆಳವಣಿಗೆಯ ಮೇಲೆ ನಮ್ಮ ತಂದೆಯವರ ಪ್ರಭಾವ ತುಂಬಾ ಇದೆ. ಚಿಕ್ಕಂದಿನಿಂದಲೂ ನಾನು ತೆಲುಗು, ಜೊತೆಗೆ ತೆಲುಗಿಗೆ ಅನುವಾದಗೊಂಡ ರಷ್ಯನ್, ಬೆಂಗಾಲಿ ಸಾಹಿತ್ಯಗಳೆಲ್ಲವನ್ನೂ ಓದುತ್ತಿದ್ದೆ. ನಮ್ಮ ತಂದೆ ಆ ಎಲ್ಲಾ ಪುಸ್ತಕಗಳನ್ನು ಕೊಂಡು ತಂದು ಓದಿಸುತ್ತಿದ್ದರು. ನಮ್ಮ ಮನೆಯಲ್ಲಿ ಗಾಂಧಿ–ನೆಹರೂ ಅವರ ಪಟಗಳ ಜೊತೆಗೇ ಲೆನಿನ್, ಮಾರ್ಕ್ಸ್, ಏಂಗಲ್ಸ್ ಅವರ ಚಿತ್ರಗಳೂ ಇರುತ್ತಿದ್ದವು. ನಮ್ಮ ತಂದೆ ಅವರೆಲ್ಲರ ಬಗ್ಗೆ, ಅವರು ಕೈಗೊಂಡ ಹೋರಾಟಗಳ ಬಗ್ಗೆ ಸ್ಫೂರ್ತಿದಾಯಕವಾಗಿ ಹೇಳುತ್ತಿದ್ದರು. ಹಾಗೆಯೇ ನಾನು ಯಾವುದೇ ಸಭೆ ಸಮಾರಂಭಗಳಿಗೆ ಹೋಗಬೇಕಾಗಿ ಬಂದಲ್ಲಿ ಮನೆಯಲ್ಲಿ ಯಾವ ಅಡಚಣೆಯೂ ಇರುತ್ತಿರಲಿಲ್ಲ. ನನ್ನ ಜೀವನದಲ್ಲಿ ನನ್ನದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವೂ, ಪ್ರಜಾತಾಂತ್ರಿಕ ವ್ಯವಸ್ಥೆಯೂ ನಮ್ಮ ಮನೆಯಲ್ಲಿತ್ತು.

- **ನಮ್ಮಲ್ಲಿ ಕೆಲವರು ತಾವು ಸ್ತ್ರೀವಾದಿ ಲೇಖಕಿ ಎಂದು ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಅವರ ಹಿಂಜರಿಕೆಗೆ ಕಾರಣವೇನಿರಬಹುದು?**

ಇದು ಕನ್ನಡಕ್ಕಷ್ಟೇ ಸೀಮಿತವಾಗಿಲ್ಲ (ನಗು). ಎಲ್ಲಾ ಭಾಷೆಯ ಲೇಖಕಿಯರೂ ಇದನ್ನೇ ಹೇಳುತ್ತಿದ್ದಾರೆ. ಇದಕ್ಕೆ ಕಾರಣ ಅವರು ಸ್ತ್ರೀವಾದವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ ಅನಿಸುತ್ತದೆ. ಸ್ತ್ರೀವಾದಿಗಳೆಂದರೆ ಪುರುಷದ್ವೇಷಿಗಳು, ಕುಟುಂಬಗಳನ್ನು ವಿಚ್ಛಿನ್ನ ಮಾಡುವವರೂ ಎಂದೇ ಅನೇಕರ ತಪ್ಪು ಕಲ್ಪನೆ. ಎಂಬತ್ತರ ದಶಕದಲ್ಲಾದರೆ ಸ್ತ್ರೀವಾದಿಗಳೆಲ್ಲ ಸಿಗರೇಟ್ ಸೇದುತ್ತಾರೆಂದೂ ಕುಡಿಯುತ್ತಾರೆಂದೂ ಸ್ಲೀವ್‌ಲೆಸ್ ತೊಡುತ್ತಾರೆಂದೂ ಹೇರ್ ಕಟ್ ಮಾಡುತ್ತಾರೆಂದೂ ತೀವ್ರ ಟೀಕೆಗಳನ್ನು ಎದುರಿಸಬೇಕಾಯಿತು. ಇಂತಹ ತಪ್ಪು ಗ್ರಹಿಕೆಗಳು ಮುಂದುವರೆದಿರುವುದರಿಂದಲೋ ಏನೋ ಈಗಲೂ ಲೇಖಕಿಯರು 'ನಾನು ಸ್ತ್ರೀಯರ ಕುರಿತು ಬರೆಯುತ್ತೇನೆ, ಆದರೆ ನಾನು ಸ್ತ್ರೀವಾದಿಯಲ್ಲ' ಎಂದೇ ಹೇಳುತ್ತಾರೆ. ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಹೋರಾಡುವುದು ಅದರ ಗುರಿ. ಅಂತೆಯೇ ಸ್ತ್ರೀವಾದವೆಂಬುದು ಎಲ್ಲ ಸಂವೇದನೆಗಳನ್ನೂ ಒಳಗೊಳ್ಳುವ ಹಾದಿ. ಜಾತಿವಿರೋಧಿ ಹೋರಾಟಗಳನ್ನು ಮಾಡುವವರು

> ತಾನಂದುಕೊಂಡಂತೆ ಪುರುಷನು ಅಷ್ಟು ಸ್ವೇಚ್ಛಾಜೀವಿಯೂ ಮಾನವೀಯತೆ ಉಳ್ಳವನೂ ಅಲ್ಲ. ಅವನನ್ನು ಮುತ್ತಿಕೊಂಡ ಸಂಕೋಲೆಗಳನ್ನು ಪತ್ತೆಮಾಡಿ ಅವುಗಳ ವಿರುದ್ಧ ಹೋರಾಡಿ ತಾನು ಮುಕ್ತನಾದಾಗ ಮಾತ್ರ ಅವನು ಮಾನವೀಯನಾಗಲು ಸಾಧ್ಯ.